# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## SPL.C –797/2023

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ರಘುನಾಥೇಗೌಡ | ಪ್ರಾಸಾ: | 2 |
| ತಂದೆ ಹೆಸರು | : | ಅರುಣ | ಚಾಸಾ: | 4 |
| ವಯಸ್ಸು | : | 33 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ: **15.07.2026.** | |
| ವೃತ್ತಿ | : | ಉಪವಲಯ ಅರಣ್ಯಾಧಿಕಾರಿ | | |
| ವಾಸ ಸ್ಥಳ | : | ಕೊತನೂರು, ಕೊಳ್ಳೇಗಾಲ | | |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ**:

1. ನಾನು 2019 ರಿಂದ 2025 ರವರೆಗೆ DRFO ಚಿಕ್ಕವರ್ಗಿ ಶಾಖೆ, ಯಡಿಯಾಲ ರೆಂಜಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಕಾಲಕ್ಕೆ ಚಾಸಾ-1 ರವರು RFO ಆಗಿದ್ದರು. ಚಾಸಾ-5 ರವರು ಯಡಿಯಾಲ ಶಾಖೆಯ ಉಪವಲಯ ಅರಣ್ಯಾಧಿಕಾರಿಯಾಗಿದ್ದರು. ಚಾಸಾ-6 ರಿಂದ ಚಾಸಾ-8 ರವರು ಗಸ್ತು ಅರಣ್ಯಪಾಲಕರಾಗಿದ್ದರು. ಚಾಸಾ-9 ರವರು ACF ಆಗಿದ್ದರು. ಚಾಸಾ-2 ಮತ್ತು 3 ರವರ ಪರಿಚಯ ನನಗೆ ಇದೆ.

2. ದೊಡ್ಡವರ್ಗಿ ಗ್ರಾಮ ಚಿಕ್ಕವರ್ಗಿ ಶಾಖೆ ವ್ಯಾಪ್ತಿ ಅಡಿಯಲ್ಲಿ ಬರುತ್ತದೆ. ದೊಡ್ಡವರ್ಗಿ ಗ್ರಾಮದ ಸರ್ವೇ ನಂ.36 ರ ಜಮೀನು ಗಂಗಮ್ಮ ಕೋಂ ಬಿ.ಎಸ್ ರಾಮಸಂಜೀವ್ ನಾಯ್ಡು ರವರಿಗೆ ಸೇರಿದ ಜಮೀನು ಆಗಿರುತ್ತದೆ. 1 ನೇ ಆರೋಪಿ ಗಂಗಮ್ಮರವರ ಮಗನಾಗಿರುತ್ತಾನೆ. ರಾಜು ಎಂಬುವವರು ಸದರಿ ಜಮೀನನ್ನು ಗೋಪಾಲರವರಿಂದ ಬೋಗ್ಯಕ್ಕೆ ಪಡೆದುಕೊಂಡಿದ್ದು ರಾಜು ಹಾಗೂ ಗೋಪಾಲರವರು ಸೇರಿ ಜಮೀನಿನ ವ್ಯವಸಾಯ ಮಾಡುತ್ತಿದ್ದರು. ಸದರಿ ಜಮೀನಿನಲ್ಲಿ ರಾಗಿ ಬೆಳೆಯನ್ನು ಬೆಳೆಸಿದರು. ಸದರಿ ಜಮೀನಿನ ಸುತ್ತಲೂ ತಂತಿ ಬೇಲಿ, ಮರದ ಗುಟ್ಟುಗಳನ್ನು ನೆಟ್ಟಿದ್ದರು. ಮರದ ಗೂಟಗಳಿಗೆ ಅಲ್ಯೂಮಿನಿಯಂ ವೈಯರ್ ಕಟ್ಟಿ ಮೈನ್ ಲೈನನಿಂದ ವಿದ್ಯುತ ಸಂಪರ್ಕವನ್ನು

ಅಳವಡಿಸಿಕೊಂಡಿದ್ದರು ಹಾಗೂ ರಾತ್ರಿಯ ವೇಳೆ ಕಾಡು ಪ್ರಾಣಿಗಳಿಂದ ಬೆಳೆ ರಕ್ಷಣೆಗಾಗಿ ರಾತ್ರಿ ವೇಳೆ ವಿದ್ಯುತ ಸಂಪರ್ಕವನ್ನು ಸದರಿ ಅಲ್ಯೂಮಿನಿಯಂ ವೈಯರಿಗೆ ಹರಿಸುತ್ತಿದ್ದರು.

3. ದಿ– 13.01.2023 ರಂದು ಬೆಳಿಗ್ಗೆ ಚಾಸಾ–1 ರವರಿಗೆ ಮೇಲೆ ಹೇಳಿದಂತಹ ಜಮೀನಿನಲ್ಲಿ ಆನೆಯು ಮೃತಪಟ್ಟಿರುವುದಾಗಿ ಮಾಹಿತಿಯು ಬಂದಿರುತ್ತದೆ. ಅದರಂತೆ ಚಾಸಾ–1, ಚಾಸಾ–5 ರಿಂದ 9 ಮತ್ತು ನಾನು ಸದರಿ ಜಮೀನಿಗೆ ಹೋಗಿರುತ್ತೇವೆ. ಸದರಿ ಜಮೀನಿಗೆ ಹೋದಾಗ ಅಲ್ಲಿ ಒಂದು ಆನೆಯು ಮೃತಪಟ್ಟಿತ್ತು. ಅದನ್ನು ಪರಿಶೀಲಿಸಿದ್ದಾಗ ಅದರ ಸೊಂಡಿಲಿನಲ್ಲಿ ಸುಟ್ಟು ಗಾಯಗಳು ಇದ್ದವು. ಸದರಿ ಘಟನೆಯು ದಿ– 12.01.2023 ರ ರಾತ್ರಿ ವೇಳೆ ನಡೆದಿರುತ್ತದೆ. ನಂತರ ಚಾಸಾ–1 ರವರು ಪೊಲೀಸರಿಗೆ ಸದರಿ ವಿಚಾರದ ಬಗ್ಗೆ ದೂರನ್ನು ನೀಡಿರುತ್ತಾರೆ.

4. ನಂತರ ಪೊಲೀಸರು ಸ್ಥಳಕ್ಕೆ ಬಂದು, ಸ್ಥಳವನ್ನು ಪರಿಶೀಲಿಸಿರುತ್ತಾರೆ. ಚಾಸಾ1 ರವರು ಸ್ಥಳವನ್ನು ತೋರಿಸಿರುತ್ತಾರೆ. ಪೊಲೀಸರು ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 4 ಗಂಟೆವರೆಗೆ ಚಾಸಾ–1, ಚಾಸಾ–5 ರಿಂದ 9 ಮತ್ತು ನನ್ನ ಸಮಕ್ಷಮ ಹಾಗೂ ಪಂಚರಾದ ಚಾಸಾ–2 ಮತ್ತು 3 ರವರು ಸಮಕ್ಷಮ ಜರುಗಿಸಿ 3 ಕಾಡು ಜಾತಿಯ ಮರದ ದೊಣ್ಣೆಗಳನ್ನು ಹಾಗೂ 60 ಮೀ ಅಲ್ಯೂಮಿನಿಯಂ ತಂತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅಲ್ಯೂಮಿನಿಯಂ ತಂತಿ ಮತ್ತು ಮರದ ದೊಣ್ಣೆಗಳನ್ನು ಪ್ರತ್ಯೇಕ ಬಿಳಿ ಚೀಲದಲ್ಲಿ ಹಾಕಿ ಸೀಲ ಮಾಡಿರುತ್ತಾರೆ. ಅಲ್ಯೂಮಿನಿಯಂ ತಂತಿ ಮತ್ತು ಮರದ ದೊಣ್ಣೆಗಳನ್ನು ವಿದ್ಯುತ ಸಂಪರ್ಕವನ್ನು ಹರಿಸಲು ಬಳಸಲಾಗಿರುತ್ತದೆ. ಸಾಕ್ಷಿದಾರರಿಗೆ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿದಾರರು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ–2(ಬಿ)** ಎಂದು ಗುರುತಿಸಲಾಯಿತು. ಪಂಚನಾಮೆಗೆ ಚಾಸಾ–1, ನಾನು, ಚಾಸಾ–5, ಚಾಸಾ–2 ಮತ್ತು 3 ರವರು ಸಹಿಯನ್ನು ಹಾಕಿರುತ್ತೇವೆ. ದೊಣ್ಣೆಗಳನ್ನು ಮತ್ತು ಅಲ್ಯೂಮಿನಿಯಂ ತಂತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಮುದ್ದೆ

ಮಾಲು–1 ಮತ್ತು 2 ನೇ ತೋರಿಸಲಾಗಿ ಅವುಗಳು ನಿಪಿ–2 ಪಂಚನಾಮೆ ಕಾಲಕ್ಕೆ ಅಮಾನತ್ತುಪಡಿಸಿಕೊಳ್ಳಲಾದಂತಹ ದೊಣ್ಣೆ ಮತ್ತು ತಂತಿಗಳಾಗಿರುತ್ತವೆ ಎಂದು ಗುರುತಿಸಿ ನುಡಿದಿರುತ್ತಾರೆ. ಸಾಕ್ಷಿದಾರರಿಗೆ ನಿಪಿ–3 ರಿಂದ 8 ಪೋಟೋಗಳನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಪೋಟೋಗಳನ್ನು ನಿಪಿ–2 ಪಂಚನಾಮೆ ಕಾಲಕ್ಕೆ ತೆಗೆಯಾಲಾಗಿರುತ್ತದೆ ಎಂದು ನುಡಿಯುತ್ತಾರೆ. ಈ ವಿಚಾರಗಳ ಬಗ್ಗೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : 2 ನೇ ಆರೋಪಿ ಪರ ವಕೀಲರಿಂದ :**

5. ನನಗೆ ಘಟನೆಯ ಬಗ್ಗೆ ಚಾಸಾ–1 ರವರಿಂದ ಮಾಹಿತಿ ಬಂದಾಗ ನಾನು ಯಡಿಯಾಲ ವಸತಿ ಗೃಹದಲ್ಲಿ ಇದ್ದೆನು. ವಸತಿ ಗೃಹದಿಂದ ಘಟನಾ ಸ್ಥಳವು ಸುಮಾರು 15 ಕಿ.ಮೀ ದೂರದಲ್ಲಿದೆ. ಸ್ಥಳಕ್ಕೆ ನಾವು 7.45 ಗಂಟೆಗೆ ತಲುಪಿರುತ್ತೇವೆ. ಸ್ಥಳಕ್ಕೆ ಹೋದಾಗ ಆನೆಯು ರಸ್ತೆಗೆ ತಾಗಿದಾಗೆಯೇ ಮಲಗಿತ್ತು ಎಂದರೆ ಸರಿ. ಸದರಿ ಸರ್ವೇ ನಂಬರಿನಲ್ಲಿ ಮೊದಲು ಬೆಳೆ ಪರಿಹಾರ ಸರ್ವೇಯನ್ನು ಮಾಡಿದ್ದರಿಂದ ಸದರಿ ಜಮೀನು ಸರ್ವೇ ನಂ.36 ಆಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಸದರಿ ಜಮೀನಿನ ಪಕ್ಕದ ಜಮೀನು ಯಾವುದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.36 4 ಎಕರೆ 20 ಗುಂಟೆ ವಿಸ್ತೀರ್ಣದ ಜಮೀನಾಗಿರುತ್ತದೆ. ಸದರಿ ಜಮೀನು ಗಂಗಮ್ಮ ಹಾಗೂ ರಾಮಸಂಜೀವನಾಯ್ಡು ರವರ ಹೆಸರಿನಲ್ಲಿರುತ್ತದೆ. ಸದರಿ ಸರ್ವೇ ನಂಬರನ ಸುತ್ತಲೂ ಇರುವ ಜಮೀನುಗಳು ಯಾವುದಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಬೆಳೆ ಪರಿಹಾರ ಸರ್ವೇ ಮಾಡಬೇಕಾದರೆ ಎಲ್ಲಾ ಜಮೀನುಗಳ ಸರ್ವೇ ಮಾಡುತ್ತೇವೆ ಎಂದರೆ ಸರಿ. ಸರ್ವೇ ನಂ.36 ರ ಪಹಣಿ ಪತ್ರಿಕೆಯಲ್ಲಿ ಅನುಭವ ಕಲಂನಲ್ಲಿ ಯಾರ ಹೆಸರು ತೋರಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

6. ಘಟನಾ ಸ್ಥಳದಿಂದ ಕಾಡು ಸುಮಾರು 800 ಮೀ ನಿಂದ 1 ಕಿ.ಮೀ ದೂರದಲ್ಲಿ ಇದೆ. ಕಾಡು ಅಂಚಿನಿಂದ ಬೆಳೆ ಬೆಳೆದಿರುವ ಜಮೀನುಗಳ ಮಧ್ಯೆ ಟ್ರೆಂಚ್ ಗಳಿವೆ ಎಂದರೆ ಸರಿ. ಕಾಡು ಅಂಚಿನಿಂದ ಆನೆ ಬಿದ್ದಿದ್ದ ಸ್ಥಳದವರೆಗೆ ಸುಮಾರು ಜನ ರೈತರು ಬೆಳೆ ಬೆಳೆದಿರುತ್ತಾರೆ ಎಂದರೆ ಸರಿ. ನಮ್ಮೆಲ್ಲರ ಬಳಿ ಹೈ ಆ್ಯಂಡ್ ಮೊಬೈಲ್ ಕ್ಯಾಮರಗಳಿರುತ್ತವೆ

ಎಂದರೆ ಸರಿ. ಸ್ಥಳದಲ್ಲಿ ಕಂಬಗಳನ್ನು ನೆಟ್ಟಿರುವ ಸ್ಥಳ ಹಾಗೂ ಕಂಬದಿಂದ ವೈಯರ್ ನ್ನು ಅಳವಡಿಸಿದ್ದರ ಬಗ್ಗೆ ಮೊಬೈಲ್ ನಲ್ಲಿ ವಿಡಿಯೋ ಚಿತ್ರೀಕರಣ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ವಿಡಿಯೋ ಚಿತ್ರೀಕರಣ ಮಾಡಲಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ವೇ ನಂ.36 ರಲ್ಲಿ 1 ½ ಎಕರೆ ಜಮೀನಿನಲ್ಲಿ ರಾಗಿ ಬೆಳೆ ಬೆಳೆಯಲಾಗಿರುತ್ತದೆ. ಸದರಿ ಜಮೀನಿನಲ್ಲಿ ಎರಡು ಪಾತಿಗಳನ್ನು ಮಾಡಲಾಗಿರುತ್ತದೆ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ ಇರುತ್ತದೆ, ಪಶ್ಚಿಮಕ್ಕೆ ರಾಗಿ ಬೆಳೆದ ಬೇರೆಯವರ ಜಮೀನು ಇರುತ್ತದೆ, ಉತ್ತರಕ್ಕೆ ಸರ್ಕಾರಿ ಓಣಿ ಮತ್ತು ದಕ್ಷಿಣಕ್ಕೆ ಖಾಲಿ ಜಮೀನು ಇತ್ತು.

7. ಸರ್ವೇ ನಂ.36 ಜಮೀನಿನ ಸುತ್ತ 36 ದೊಣ್ಣೆಗಳನ್ನು ಅಳವಡಿಸಲಾಗಿತ್ತು. ನಿಪಿ-2 ಮಹಜರ್ ನಲ್ಲಿ ಯಾವ ಯಾವ ದಿಕ್ಕಿಗೆ ಎಷ್ಟು ದೊಣ್ಣೆಗಳು ಇತ್ತು ಎಂದು ಬರೆಯಾಗಿರುವುದಿಲ್ಲ. ಸದರಿ 36 ದೊಣ್ಣೆಗಳಿರುವ ಬಗ್ಗೆ ಪೋಟೋಗಳನ್ನು ತೆಗೆಯಲಾಗಿರುವುದಿಲ್ಲ.

8. 2 ನೇ ಆರೋಪಿಯು ಸರ್ವೇ ನಂ.36 ರನ್ನು ಬೋಗ್ಯಕ್ಕೆ ಪಡೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. 1 ಮತ್ತು 2 ನೇ ಆರೋಪಿಗಳು ಎಂದೂ ಕೂಡಾ ಸರ್ವೇ ನಂ.36 ರಲ್ಲಿ ವ್ಯವಸಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ 8 ಪೋಟೋಗಳಲ್ಲಿ ದೊಣ್ಣೆಗಳು ಮತ್ತು ಅವುಗಳಿಗೆ ಅಲ್ಯೂಮಿನಿಯಂ ತಂತಿಯನ್ನು ಅಳವಡಿಸಿದ್ದ ಬಗ್ಗೆ ಎಲ್ಲಿಯೂ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ನಿಪಿ-6 ರಲ್ಲಿ ದೊಣ್ಣೆಯು ಕಾಣಿಸುತ್ತದೆ ಎಂದು ನುಡಿಯುತ್ತಾರೆ. ನಿಪಿ-7 ರಲ್ಲಿ ರಾಗಿ ಬೆಳೆಯು ಕಾಣಿಸುತ್ತಿದೆ. ನಿಪಿ-7 ರಲ್ಲಿ ಯಾವುದೇ ರಾಗಿ ಬೆಳೆ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ಎಷ್ಟು ಅಡಿ ಉದ್ದ ಮತ್ತು ಎಷ್ಟು ಅಗಲದ್ದಾಗಿತ್ತು ಎಂದು ನಿಪಿ-2 ರಲ್ಲಿ ಬರೆಯಾಗಿರುವುದಿಲ್ಲ. ಮು.ಮಾ-1 ದಂತಹ ದೊಣ್ಣೆಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮು.ಮಾ-1 ನ್ನು ಸರ್ವೇ ನಂ.36 ರಲ್ಲಿ ಅಳವಡಿಸಲಾಗಿತ್ತು ಎಂದು ಗುರುತಿಸಲು ಅದರ ಮೇಲೆ ವಿಶೇಷ ಗುರುತು ಇರುವುದಿಲ್ಲ ಎಂದರೆ ಸರಿ. ಆನೆಯು ಬಿದ್ದಿದ್ದ

ಸ್ಥಳವು ಸರ್ಕಾರಿ ರಸ್ತೆಯಾಗಿರುವುದರಿಂದ ಆನೆ ಸತ್ತಿದ್ದಕ್ಕೂ ಹಾಗೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಆನೆಯು ಸರ್ಕಾರಿ ರಸ್ತೆ ಮತ್ತು ಸರ್ವೇ ನಂ.36 ಜಮೀನಿನ ಮಧ್ಯೆದಲ್ಲಿ ಬಿದ್ದಿತ್ತು. ಸರ್ವೇ ನಂ.36 ಜಮೀನಿನಲ್ಲಿ ಯಾವುದೇ ದೊಣ್ಣೆ ಮತ್ತು ತಂತಿಗಳನ್ನು ಅಳವಡಸದೇ ಇದುದರಿಂದ ಆ ಬಗ್ಗೆ ಯಾವುದೇ ಫೋಟೋಗಳನ್ನು ತೆಗೆಯಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಕಾಡು ಪ್ರಾಣಿಗಳು ವ್ಯವಸಾಯ ಪ್ರದೇಶಕ್ಕೆ ಬರಬಾರದೆಂದು ಕಾಡಿನ ಪಕ್ಕದಲ್ಲಿ ಸೋಲಾರ ತಂತಿಗಳನ್ನು ಅಳವಡಿಸಲಾಗಿರುತ್ತದೆ ಎಂದರೆ ಸರಿ.

9. ನಾನು ಹೇಳಿದಂತೆ ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಸ್ಥಳದಲ್ಲಿನಿಪಿ-2 ಪಂಚನಾಮೆಗೆ ಸಹಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಪಂಚನಾಮೆಯನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿ ಅಲ್ಲಿಯೇ ನನ್ನ ಸಹಿಯನ್ನು ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-3 ರಿಂದ 8 ಫೋಟೋಗಳಲ್ಲಿ ಕಾಣುವಂತಹ ಜಮೀನು ಆರೋಪಿಗಳಿಗೆ ಸೇರಿದ ಜಮೀನು ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಿಂದ :**

10. ನಾವು ಸ್ಥಳಕ್ಕೆ ಹೋದ 1 ಗಂಟೆಯ ನಂತರ ಪೊಲೀಸರು ಅಲ್ಲಿಗೆ ಬಂದಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬರುವ ಮೊದಲು ರೆವಿನ್ಯೂ ಅಧಿಕಾರಿಗಳನ್ನು ನಾವು ಸ್ಥಳಕ್ಕೆ ಬರಮಾಡಿಕೊಂಡಿರುವುದಿಲ್ಲ. ನಂತರವೂ ಕೂಡಾ ರೆವಿನ್ಯೂ ಅಧಿಕಾರಿಗಳು ಅಲ್ಲಿಗೆ ಬಂದಿರುವುದಿಲ್ಲ. ವಾರ, ಗುತ್ತಿಗೆ ಮತ್ತು ಬೋಗ್ಯದ ನಡುವೆ ವ್ಯತ್ಯಾಸ ನನಗೆ ಗೊತ್ತಿರುತ್ತದೆ. ಸ್ಥಳಕ್ಕೆ ಪಂಚರಾದ ಚಾಸಾ-2 ಮತ್ತು 3 ರವರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ಘಟನೆಗೂ 1 ಮತ್ತು 2 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

11. 1 ನೇ ಆರೋಪಿಯ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಅಳವಡಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.

**<u>ಮರುವಿಚಾರಣೆ : ಇಲ್ಲ</u>**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

**(ಸಂಧ್ಯಾ ರಾವ್ ಪಿ)**
**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.,**
**ಮೈಸೂರು.**